ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/51/2016-17. ದಿನಾಂಕ:06-09-2016.

| ವಾದಿಗಳು | ಪ್ರತಿವಾದಿಗಳು |
|---|---|
| ಎ.ಜಿ.ಉಮಾ ಗಂಡ ಐನಳ್ಳಿ ಗೋವಿಂದಪ್ಪ<br>ಮನೆ ನಂ:1817/30. ಶ್ಯಾಮನೂರು<br>ಎಸ್.ಎಸ್.ಬಡಾವಣೆ ದಾವಣಗೆರೆ ನಗರ<br>ದಾವಣಗೆರೆ ಜಿಲ್ಲಾ | ಪಿ.ಹೆಚ್.ವಿಮಲಮ್ಮ ಗಂಡ ಶ್ಯಾಮಣ್ಣ<br>ಮಲ್ಲನಾಯ್ಕನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕೊಟ್ಟೂರು ಗ್ರಾಮದ ಸನಂ 1443/4. ವಿಸ್ತೀರ್ಣ 3-00. ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೊಟ್ಟೂರು ಗ್ರಾಮದ ಸನಂ 1443/4. ವಿಸ್ತೀರ್ಣ 3-00. ಎಕ್ರೆ ಜಮೀನನ್ನು ಸದರಿ ತಾಲೂಕು ಮಲ್ಲನಾಯ್ಕನಹಳ್ಳಿ ಪಿ.ಹೆಚ್.ವಿಮಲಮ್ಮ ಗಂಡ ಶ್ಯಾಮಣ್ಣ ಇವರಿಂದ ದಾವಣಗೆರೆ ನಗರದ ಎ.ಜಿ.ಉಮಾ ಗಂಡ ಐನಳ್ಳಿ ಗೋವಿಂದಪ್ಪ ಇವರು ದಿನಾಂಕ 21-10-2015 ರ ಡಾಕ್ಯುಮೆಂಟ್ ನಂಬರ್: 2317/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪೊನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೊಟ್ಟೂರು ಇವರು ನಮೂನೆ-21 ನೋಟಿಸನ್ನು ದಿನಾಂಕ 26-10-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಿಕ್ರಯದಾರರಾದ ಪಿ.ಹೆಚ್.ವಿಮಲಮ್ಮ ಗಂಡ ಶ್ಯಾಮಣ್ಣ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 44/2015-16. ದಿನಾಂಕ 27-11-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 02-09-2016 ರಿಂದ 06-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೊಟ್ಟೂರು ಗ್ರಾಮದ ಸನಂ 1443/4. ವಿಸ್ತೀರ್ಣ 3-00. ಎಕ್ರೆ ಜಮೀನನ್ನು ಸದರಿ ತಾಲೂಕು ಮಲ್ಲನಾಯ್ಕನಹಳ್ಳಿ ಗ್ರಾಮದ ಪಿ.ಹೆಚ್.ವಿಮಲಮ್ಮ ಗಂಡ ಶ್ಯಾಮಣ್ಣ ಇವರಿಂದ ದಿನಾಂಕ 21-10-2015 ರ ಡಾಕ್ಯುಮೆಂಟ್ ನಂಬರ್: 2317/2015-16. ರ ಪ್ರಕಾರ ರೂ: 3.45.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಕ್ರಯದಾರರು ನಮಗೆ ಹಣ ಕೊಡಬೇಕಾಗಿರುವುದರಿಂದ ಹಾಗೂ ನಮಗೆ ಹಣ ಸಂಪೂರ್ಣ ಸಂದಾಯವಾಗುವವರೆಗೂ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮು.ತಿ.ನೋ:-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ನೊಂದಾಯಿತ ಕ್ರಯ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೊಟ್ಟೂರು ಗ್ರಾಮದ ಸನಂ 1443/4. ವಿಸ್ತೀರ್ಣ 3-00. ಎಕ್ರೆ ಜಮೀನನ್ನು ದಿನಾಂಕ 21-10-2015 ರ ಡಾಕ್ಯುಮೆಂಟ್ ನಂಬರ್: 2317/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಎ.ಜಿ.ಉಮಾ ಗಂಡ ಐನಳ್ಳಿ ಗೋವಿಂದಪ್ಪ ದಾವಣಗೆರೆ ನಗರ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. .

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎ.ಜಿ.ಉಮಾ ಗಂಡ ಐನಳ್ಳಿ ಗೋವಿಂದಪ್ಪ. ಮನೆ ನಂ:1817/30. ಶ್ಯಾಮನೂರು ಎಸ್.ಎಸ್.ಬಡಾವಣೆ ದಾವಣಗೆರೆ ನಗರ ದಾವಣಗೆರೆ ಜಿಲ್ಲಾ ಇವರಿಗೆ ಕಳುಹಿಸಿ ಕೊಡಲಾಗಿದೆ.

1) ತಕರಾರುದಾರರಾದ ಪಿ.ಹೆಚ್.ವಿಮಲಮ್ಮ ಗಂಡ ಶ್ಯಾಮಣ್ಣ ಮಲ್ಲನಾಯ್ಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.

2) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.

3) ಅಪೀಲು ಅವಧಿ 60 ದಿವಸ ಇರುತ್ತದೆ.